a) Minimum fixed fare from Rs. 2.50 to Rs. 2 80 and

b) Fare per Km. from Rs. 1.30 to Rs. 1.50 respectively.

This revision will be effective from today and provisional.

As regards the demand of the Autorikshaw Drivers' Union for fixing the minimum fare at Rs. 3/-, this will be considered by the Experts Committee constituted by the State Government with the Transport Commissioner as the Chairman. A Meeting of this Committee has been convened on 9th April 1990 and the Committee will give its report to Government within 30 days.

ಸಾರ್ವಜನಿಕ ಮಹತ್ವವುಳ್ಳ ವಿಷಯದ ಪ್ರಸ್ತಾವ
ಬೆಳಗಾಂ ಮಹಾನಗರ ಪಾಲಿಕೆಯ ಕಟ್ಟಡದ ಮೇಲೆ ಹಾರಾಡುತ್ತಿರುವ
ಭಗವ ಜಂಡಾವನ್ನು ತೆಗೆಯುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಮಹಾನಗರ ಪಾಲಿಕೆ ಚುನಾವಣೆಯನ್ನು ಮುಂದೂಡ ಬೇಕೆಂದು ಒಂದು ವರ್ಷದಿಂದ ಕೇಳುತ್ತಿದ್ದಾರೆ.

ಅಧ್ಯಕ್ಷರು.—ಅದಕ್ಕೂಂದು ತಿದ್ದುಪಡಿ ಇಲ್ಲಿ ಬರುತ್ತಾ ಇದೆ.

ಶ್ರೀ ವಾಟಾಳ್ ನಾಗರಾಜ್.—ಬೆಳಗಾವಿಯಿಂದ ೫ ಸಾವಿರ ಜನರ ನಿಯೋಗ ಬೆಂಗಳೂರಿಗೆ ಬಂದಿದೆ. ಬೆಳಗಾವಿ ಮಹಾನಗರ ಪಾಲಿಕೆಯ ಕಟ್ಟಡದ ಮೇಲೆ ಹಾರಾಡುತ್ತಿರುವ ಭಗವ ಜಂಡಾವನ್ನು ಯಾವಾಗ ತೆಗೆಯುತ್ತೀರಿ ? ಸರ್ಕಾರದ ಪರವಾಗಿ ಉತ್ತರ ಹೇಳಬೇಕು. ಇದು ಅತ್ಯಂತ ಘೋರ ಅಪರಾಧವಾಗುತ್ತದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಚುನಾವಣೆ ಮಾಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದಾರೆ. ಈ ಬಗ್ಗೆ ಉತ್ತರ ದೊರೆಯದಿದ್ದರೆ ನಾನು ಧರಣಿ ಮಾಡಬೇಕಾಗುತ್ತದೆ ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಹಾಕಿರತಕ್ಕ ಧ್ವಜವನ್ನು ತೆಗೆಯುವ ತೀರ್ಮಾನಕ್ಕೆ ಸರ್ಕಾರ ಬರಬೇಕು. ಇಲ್ಲದಿದ್ದರೆ ನಾನು ಧರಣಿ ಕುಳಿತುಕೊಳ್ಳುತ್ತೇನೆ. ಇದು ಬಹಳ ಅನ್ಯಾಯ. ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ೫ ಸಾವಿರ ಜನ ಬೆಳಗಾವಿಯಿಂದ ರೈಲಿನಲ್ಲಿ ಬುತ್ತಿಕಟ್ಟಿಕೊಂಡು ಇಲ್ಲಿಗೆ ಬಂದಿದ್ದಾರೆ. ತಾವು ತಪ್ಪು ತಿಳಿದುಕೊಳ್ಳಬೇಡಿ.

ಅಧ್ಯಕ್ಷರು.—ನಿಮ್ಮನ್ನು ತಪ್ಪು ತಿಳಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನೀವು ನನ್ನಲ್ಲಿ ಆ ನಂಬಿಕೆ ಇಡಬೇಕು.

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಮಂತ್ರಿಗಳಾದ ಮೊಯಿಲಿಯವರು ಅಲ್ಲಿರತಕ್ಕ ಬಾವುಟವನ್ನು ತೆಗೆಯುವ ನಿರ್ಧಾರ ತೆಗೆದುಕೊಳ್ಳುತ್ತಾರೆಯೆ ? ತಾವು ಸಹ ಹೇಳಿದ್ದೀರಿ ರಾಜ ಮಹಾರಾಜರ ಬಾವುಟಗಳೆಲ್ಲ ಹೋಗಿವೆ. ರಾಷ್ಟ್ರಧ್ವಜ ಒಂದೇ ಇರಬೇಕು. ಮರಾಠಿ ಧ್ವಜವನ್ನು ಯಾವಾಗ ತೆಗೆದು ಹಾಕುತ್ತಾರೆನ್ನುವ ಸ್ಪಷ್ಟ ಉತ್ತರ ಬೇಕು. ಆ ಬಾವುಟವನ್ನು ಯಾವತ್ತು ತೆಗೆಯುತ್ತಾರೆ ? ಬೆಳಗಾವಿ ಮಹಾನಗರ ಪಾಲಿಕೆಗೆ ಚುನಾವಣೆ ನಡೆದರೆ ನಮಗೆ ಒಳ್ಳೆ ಆನ್ಯಾಯವಾಗುತ್ತದೆ. ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ ಅಧಿಕಾರಕ್ಕೆ ಬರುತ್ತದೆ. ಅಲ್ಲಿನ ಕನ್ನಡಿಗರಿಗೆ ಕನ್ನಡದ ಅಭಿಮಾನ ಹೋಗುತ್ತದೆ. ಈ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಹೇಳಬೇಕು.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ಎರಡು ವಿಚಾರಗಳನ್ನು ತರುತ್ತೇನೆ. ನಿನ್ನೆ ದಿವಸ ಮಾನ್ಯ ಪುಟ್ಟಸ್ವಾಮಿಗೌಡರು ಪಾರ್ಲಿಮೆಂಟ್.....

ಶ್ರೀ ವಾಟಾಳ್‌ನಾಗರಾಜ್.—ಮಾನ್ಯ ಅಧ್ಯಕ್ಷರೆ, ನಾನು ಧರಣಿ ಕುಳಿತುಕೊಳ್ಳುತ್ತೇನೆ. ಇದರಿ ಬಹಳ ಅನ್ಯಾಯ.

(ಈ ಹಂತದಲ್ಲಿ ಮಾನ್ಯ ಸದಸ್ಯರು ತಮ್ಮ ಪೀಠದಿಂದ ಹೊರಗೆ ಬಂದು ಸಭಾಧ್ಯಕ್ಷರ ಪೀಠದ ಮುಂಭಾಗದಲ್ಲಿ ಧರಣಿ ಕುಳಿತರು)